# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ರಾಜ್ಯದಲ್ಲಿ School of Mining ಸ್ಥಾಪನೆ ಕುರಿತು.

ಓದಲಾಗಿದೆ: ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:15.05.2021ರಂದು ನಡೆದ ಸಭೆಯ ನಡವಳಿ

**ಪ್ರಸ್ತಾವನೆ:**

ಮೇಲೆ ಓದಲಾದ ನಡವಳಿಯಲ್ಲಿ ಬಳ್ಳಾರಿಯ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಆವರಣದಲ್ಲಿ School of Mining ಅನ್ನು ಸ್ಥಾಪಿಸುವ ನಿಟ್ಟಿನಲ್ಲಿ, ಈ ವಿಷಯಕ್ಕೆ ಸಂಬಂಧಿಸಿದಂತೆ ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಐಐಟಿ ಧನಬಾದ್ ನಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಸಮಿತಿಯೊಂದನ್ನು ರಚಿಸಲು ಐಐಟಿ ಧನಬಾದ್ ಸಂಸ್ಥೆಯನ್ನು ಮಾರ್ಗದರ್ಶಕ ಸಂಸ್ಥೆಯನ್ನಾಗಿ (Mentor Institute) ನೇಮಿಸಿಕೊಳ್ಳಲು ನಿರ್ಣಯಿಸಲಾಗಿದೆ.

ರಾಜ್ಯದ ಗಣಿಗಾರಿಕೆ ಕ್ಷೇತ್ರದ ಉನ್ನತಿಗಾಗಿ, ರಾಜ್ಯಕ್ಕೆ ಹೆಚ್ಚುಹೆಚ್ಚು ಮೈನಿಂಗ್ ಇಂಜಿನಿಯರ್ ಗಳು, ಪರಿಸರ ಇಂಜಿನಿಯರ್‌ಗಳು, ಭೂವಿಜ್ಞಾನಿಗಳು ಮತ್ತು ಐಟಿ ವೃತ್ತಿಪರರು ಬೇಕಾಗುತ್ತಾರೆ. ಅಂತರ ರಾಷ್ಟ್ರೀಯ ಮಾನದಂಡಗಳ ಪ್ರಕಾರ ಗಣಿಗಾರಿಕೆ ವಲಯದ ನಿಯಂತ್ರಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಮರ್ಪಕವಾಗಿ ಬಲಪಡಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು "ಸ್ಕೂಲ್ ಆಫ್ ಮೈನಿಂಗ್ ಸ್ಥಾಪಿಸಲು ಉದ್ದೇಶಿಸಿದೆ.

a) Mentor Institute) a) Advance Technical Courses for Mining Supervision, Mines Manager (First Class and Second Class Manager), Mines mate,
b) Blasting and its techniques including deep drilling, core drilling, core sampling, data processing and analysis, Modern methods of Reserve/ Resource estimation
c) Advanced Surveying methods for surveyors
d) Mining methods Open cast mining and underground mining

ಉದ್ದೇಶಿತ ಸ್ಕೂಲ್ ಆಫ್ ಮೈನಿಂಗ್ ಸ್ಥಾಪನೆಯ ನಂತರ, ಕೈಗಾರಿಕೆ ಕ್ಷೇತ್ರದ ನಿರ್ದಿಷ್ಟ ಕ್ಷೇತ್ರವನ್ನು ಅವಲಂಬಿಸಿ ಅತ್ಯಗತ್ಯವಾದ ಇನ್ನಿತರೆ ಕೋರ್ಸ್‌ಗಳ ಸೇರ್ಪಡೆ ಸಹ ಮಾಡಲು ಅಂತಿಮಗೊಳಿಸಲಾಗುವುದು. ಈ ಹಿನ್ನೆಲೆಯಲ್ಲಿ ಮೈನಿಂಗ್ ಇಂಜಿನಿಯರಿಂಗ್ ವಿಭಾಗ, ಐ.ಐ.ಟಿ. ಧನಬಾದ್ ರವರ ಅಭಿಪ್ರಾಯವನ್ನು ಸಹ ಪಡೆಯಲಾಗಿದ್ದು, ಸದರಿ ಪ್ರಸ್ತಾವನೆಯ ಕುರಿತು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಅಧ್ಯಕ್ಷತೆಯಲ್ಲಿ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಸದರಿ ಚರ್ಚೆಯ ನಿರ್ಣಯದನ್ವಯ ಸ್ಕೂಲ್ ಆಫ್ ಮೈನಿಂಗ್ ಸ್ಥಾಪನೆಯ ಕುರಿತಂತೆ ಹಿರಿಯ ಅಧಿಕಾರಿ/ವಿಷಯ ತಜ್ಞರು/ಪರಿಣಿತರನ್ನೊಳಗೊಂಡಂತೆ ಸಮಿತಿ ರಚಿಸಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಸಿಐ 81 ಎಂಎಂಎಂ 2021,
## ಬೆಂಗಳೂರು, ದಿನಾಂಕ: 08/07/2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ "School of Mining" ಅನ್ನು ಸ್ಥಾಪಿಸುವ ಕುರಿತಂತೆ ಅಗತ್ಯ ಸಲಹೆ / ಸೂಚನೆಗಳನ್ನು ಅಭಿಪ್ರಾಯದೊಂದಿಗೆ ವರದಿಯನ್ನು ಈ ಆದೇಶದ ದಿನಾಂಕ ದಿಂದ 03 ತಿಂಗಳ ಅವಧಿಯೊಗಳಗೆ ಸರ್ಕಾರಕ್ಕೆ ಸಲ್ಲಿಸಲು ಈ ಕೆಳಕಂಡ ತಜ್ಞರ / ಹಿರಿಯ ಅಧಿಕಾರಿ/ವಿಷಯ ತಜ್ಞರು/ ಪರಿಣಿತರನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ. (ಈ ಸಮಿತಿಯTerms of Reference ಅನ್ನು ಅನುಬಂಧದಲ್ಲಿರಿಸಿದೆ)

....2

| | | |
|---|---|---|
| 01 | Prof. H.P. Khincha, ex-Vice Chancellor, Vishweswaraiah Technical University. | Chairman |
| 02 | Prof. Bisilaiah, former Vice Chancellor Gandhi Krishi Vigyana Kendra (GKVK) | Vice Chairman |
| 03 | Dr. Prabhakar, Sangurmath, Nominated Director, HGML | Member |
| 04 | IIT Dhanabad – Represented by its Director | Member |
| 05 | Prof. Harshavardhan, Head, Mining Engineer Dept. NIT, Surathkal. | Member |
| 06 | Dr. M.R. Patil, Professor School of civil & Environmental Engineering KLE Technological University, Vidyanagar, Hubballi | Member |
| 07 | Sri D.V. Pichamuttu Director, Institute of Engineering | Member |
| 08 | Director, Mines and Geology. | Convenor |

ಮೇಲಿನ ಸಮಿತಿಯು ನಿರ್ವಹಿಸುವ ಪ್ರತಿ ಸಭೆಯ ಶುಲ್ಕವು ಅಧ್ಯಕ್ಷರಿಗೆ ರೂ. 4000/- ಮತ್ತು ಸದಸ್ಯರುಗಳಿಗೆ ರೂ. 3000/- ನಿಗಧಿಗೊಳಿಸಲಾಗಿದ್ದು, ಸದರಿ ವೆಚ್ಚವನ್ನು 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ ಸಂಖ್ಯೆ 2853-02-102-0-15 (059)ರಲ್ಲಿ ಭರಿಸುವುದು.

ಮುಂದುವರೆದು, ಸಭೆಯನ್ನು ಜರುಗಿಸಲು ಅಗತ್ಯವಿರುವ ಎಲ್ಲಾ ವ್ಯವಸ್ಥೆಯನ್ನು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಒದಗಿಸತಕ್ಕದ್ದು.

9/7/2021

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Suma 8/7/2021
(ಸುಮ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಗಣಿ)

**ಇವರಿಗೆ:**

1) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
2) ಸಮಿತಿಯ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೆ (ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಮೂಲಕ)
3) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
4) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
6) ಸರ್ಕಾರದ ಜಂಟಿ ಕಾರ್ಯದರ್ಶಿ(ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
7) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ